ಓ ಎಸ್ ನಂ. 20/2022
ಡಿ ಡಬ್ಲ್ಯು 1
ದಿನಾಂಕ 24-01-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರಃ ಶ್ರೀ ಡಿ ಎಸ್ ವಕೀಲರಿಂದಃ</u>

ನನ್ನ ಮಾವನ ಹೆಸರು ಸೋಮಶೇಖರಯ್ಯ. ನನ್ನ ಮಾವನ ತಂದೆಯ ಹೆಸರು ಶಿವಯ್ಯ. ಅವರನ್ನು ಶಿವಣ್ಣಯ್ಯ ಎಂತಲೂ ಕರೆಯುತ್ತಿದ್ದರು ಎಂದರೆ ಸರಿಯಲ್ಲ. ಶಿವಯ್ಯನವರಿಗೆ 5 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು. ಕೋವೀಡ್ ಸಮಯದಲ್ಲಿ ನಾನು ನನ್ನ ತವರು ಮನೆಯಲ್ಲಿ ಇದ್ದೇನು ಎಂದರೆ ನಿಜ. ಸಾಕ್ಷಿ ಮುಂದುವರೆದು ನಾನು ಬಾಣಂತನದ ಸಲುವಾಗಿ ಅರಸೀಕೆರೆಯ ನನ್ನ ತವರು ಮನೆಯಲ್ಲಿ ಇದ್ದೇನು ಎಂದು ನುಡಿದಿರುತ್ತಾರೆ. ಕೋವೀಡ್‌ನಿಂದಾಗಿ ನನ್ನ ಅತ್ತೆ ಮೊದಲು ಮರಣ ಹೊಂದಿರುತ್ತಾರೆ. ನನ್ನ ಅತ್ತೆಯನ್ನು ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಪಡಿಸಲಾಗಿತ್ತು. ನನ್ನ ಅತ್ತೆ ದಿನಾಂಕ 12/05/2021 ರಂದು ಮರಣ ಹೊಂದಿರುತ್ತಾರೆ. ನನ್ನ ಅತ್ತೆಯನ್ನು ನನ್ನ ಗಂಡ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ.

ನನ್ನ ಮಾವ ಅರಸೀಕೆರೆಯ ಶಿವಕುಮಾರ್ ಆಸ್ಪತ್ರೆ ಇಲ್ಲಿ ಮರಣ ಹೊಂದಿರುತ್ತಾರೆ. ನನ್ನ ಮಾವ ದಿನಾಂಕ 30/05/2021 ರಂದು ಮರಣ ಹೊಂದಿರುತ್ತಾರೆ. ನನ್ನ ಮಾವ ಆಸ್ಪತ್ರೆಗೆ ದಾಖಲಾದ ಎರಡು ದಿನಗಳಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 5-6 ದಿನಗಳ ನಂತರ ಮರಣ ಹೊಂದಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ಮಾವನನ್ನು ನನ್ನ ಗಂಡ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಗಂಡ ಮತ್ತು ಮಾವ ಇಬ್ಬರಿಗೂ ಕೋವೀಡ್ ಇದ್ದು, ನನ್ನ ಗಂಡನಿಗೆ ಹೆಚ್ಚಿನ ಚಿಕಿತ್ಸೆಯ ಅವಶ್ಯಕತೆ ಇದ್ದ ಕಾರಣ ಹಾಸನದ ಆಸ್ಪತ್ರೆಗೆ ಹೋಗಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ಗಂಡನನ್ನು

ಮಧುಸೂದನ್ ಎನ್ನುವವರು ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ. ನನ್ನ ಗಂಡ ದಿನಾಂಕ 26/05/2021 ರಂದು ಮರಣ ಹೊಂದಿರುತ್ತಾರೆ. ನನ್ನ ಗಂಡ ಆಸ್ಪತ್ರೆಗೆ ದಾಖಲಾಗಿ ಮೂರು ದಿನಗಳ ನಂತರ ಮರಣ ಹೊಂದಿರುತ್ತಾರೆ, ದಾಖಲಾದ ದಿನಾಂಕ ನನಗೆ ಸರಿಯಾಗಿ ನೆನಪಿಲ್ಲ.

ದಿನಾಂಕ 24/05/2021 ರಂದು ಮಂಗಳ ಆಸ್ಪತ್ರೆಗೆ ದಾಖಲಾಗಿರುತ್ತಾರೆ ಎಂದರೆ ನಿಜ. ನನ್ನ ಗಂಡನನ್ನು ಸಂಜಯ್ ಎನ್ನುವವರು ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನಗೆ ಮಧುಸೂದನ್ ರವರು ಫೋನ್ ಮಾಡಿ ನನ್ನ ಗಂಡನನ್ನು ಆಸ್ಪತ್ರೆಗೆ ದಾಖಲು ಮಾಡಿರುವುದಾಗಿ ಹೇಳಿರುತ್ತಾರೆ ಎಂದು ನುಡಿದಿರುತ್ತಾರೆ. ಸಂಜಯ್ ಎನ್ನುವವರು ನನ್ನ ಗಂಡನ ಅಕ್ಕನ ಮಗ ಎಂದರೆ ಸರಿಯಲ್ಲ. ನಾನು ಮೊದಲಿನಿಂದಲೂ ವಾದಿಯನ್ನು ನೋಡಿರುವುದಿಲ್ಲ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿ ಆ ಪೋಟೋದಲ್ಲಿ ಮದ್ಯದಲ್ಲಿ ನಿಂತಿರುವಂತಹ ವ್ಯಕ್ತಿಗಳು ತನ್ನ ಅತ್ತೆ ಮತ್ತು ಮಾವ ಎಂದು ಸಾಕ್ಷಿ ಒಪ್ಪಿಕೊಂಡ ಮೇರೆಗೆ ಮತ್ತು ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸದರಿ ಪೋಟೋವನ್ನು ನಿಪಿ-**20** ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಪೋಟೋವನ್ನು ತೋರಿಸಿ ಆ ಪೋಟೋದಲ್ಲಿ ಬಳಿ ಮತ್ತು ಬೂದು ಬಣ್ಣದ ಚೆಕ್ಸ್ ಶರ್ಟನ್ನು ಹಾಕಿರುವ ವ್ಯಕ್ತಿ ತನ್ನ ಗಂಡ ಎಂದು ಸಾಕ್ಷಿ ಒಪ್ಪಿಕೊಂಡ ಮೇರೆಗೆ ಮತ್ತು ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸದರಿ ಪೋಟೋವನ್ನು ನಿಪಿ-**21** ಎಂದು ಗುರುತಿಸಲಾಯಿತು. ನಿಪಿ-21 ರ ಪೋಟೋ ವಾದಿಯ ಮದುವೆಗೆ ಸಂಬಂದಪಟ್ಟಿದ್ದು ಎಂದರೆ ಇರಬಹುದು ನನಗೆ ಗೊತ್ತಿಲ್ಲ.

ನನ್ನ ಅತ್ತೆ, ಮಾವ ಮತ್ತು ಗಂಡನನ್ನು ಆಸ್ಪತ್ರೆಗೆ ದಾಖಲು ಮಾಡಿದ್ದು ವಾದಿ ಮಗನಾಗಿದ್ದು, ಆಸ್ಪತ್ರೆಯ ವೆಚ್ಚವನ್ನು ವಾದಿಯೇ ಭರಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆಸ್ಪತ್ರೆಯ ವೆಚ್ಚವನ್ನು ನನ್ನ ಗಂಡನ ಚಿಕ್ಕಪ್ಪನ ಮಗನಾದ ಮಧುಸೂದನ್

ಎನ್ನುವವರು ಭರಿಸಿದ್ದು, ನಾನು ಅವರಿಗೆ ಮರುಪಾವತಿ ಮಾಡುತ್ತಿದ್ದೇನೆ ಎಂದು ನುಡಿದಿರುತ್ತಾರೆ. ಆಸ್ಪತ್ರೆಯ ವೆಚ್ಚವನ್ನು ಮಧುಸೂದನ್ ಎನ್ನುವವರು ಭರಿಸಿರುತ್ತಾರೆ ಎಂದು ನಾನು ನನ್ನ ಪ್ರತಿವಾದ ಪತ್ರ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಾಲ ಎಂದು ಹೇಳಿರುತ್ತೇನೆ ಎಂದು ನುಡಿದಿರುತ್ತಾರೆ. ನನ್ನ ಗಂಡನ ವೈದ್ಯಕೀಯ ವೆಚ್ಚಕ್ಕಾಗಿ 2.5 ಲಕ್ಷ ಮತ್ತು ನನ್ನ ಮಾವನ ವೈದ್ಯಕೀಯ ವೆಚ್ಚ 60 ಸಾವಿರ ಆಗಿರುತ್ತದೆ. ಬಿಲ್ಲುಗಳನ್ನು ಹಾಜರುಪಡಿಸಿರುವುದಿಲ್ಲ, ಹಾಜರುಪಡಿಸಬಲ್ಲೆ.

ಮಂಗಳ ಆಸ್ಪತ್ರೆಯಲ್ಲಿ ನನ್ನ ಗಂಡನ ವೈದ್ಯಕೀಯ ಬಿಲ್ಲು 60,100 ರೂ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಎಷ್ಟು ಖರ್ಚಾಗಿದೆ ಎಂದು ನಮೂದು ಮಾಡಿದ್ದೇನೆಂದು ಈಗ ನನಗೆ ನೆನಪಿಲ್ಲ. ನಾನು ಹೆಚ್ಚಾಗಿ ತವರು ಮನೆಯಲ್ಲೇ ವಾಸ ಇದ್ದೆ ಎಂದರೆ ಸರಿಯಲ್ಲ. ಕೋವೀಡ್ ಸಮಯದಲ್ಲಿ ನನ್ನ ಎರಡನೇ ಮಗನಿಗೆ ಸುಮಾರು 1 ವರ್ಷ ಆಗಿತ್ತು. ಆ ಸಮಯದಲ್ಲಿ ನಾನು ನನ್ನ ತವರು ಮನೆಯಲ್ಲಿ ವಾಸ ಇದ್ದೆ ಎಂದರೆ ನಿಜ. ನನ್ನ ಗಂಡ ವ್ಯವಸಾಯ ಮತ್ತು ಎಲ್ ಐ ಸಿ ಏಜೆಂಟರಾಗಿ ಮತ್ತು ಚಿಕ್ಕಪುಟ್ಟ ಕಂಟ್ರಾಕ್ಟ ಕೆಲಸ ಮಾಡುತ್ತಿದ್ದರು. ನನ್ನ ಗಂಡನಿಗೆ ಸಾಕಷ್ಟು ಆದಾಯ ಇರಲಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ತಕ್ಕಮಟ್ಟಿಗೆ ಜೀವನ ಮಾಡುವಷ್ಟು ಆದಾಯ ಇತ್ತು ಎಂದು ನುಡಿದಿರುತ್ತಾರೆ. ಹೆಚ್ಚು ಆದಾಯ ಇಲ್ಲ ಎನ್ನುವ ಕಾರಣಕ್ಕಾಗಿ ನಾನು ಆಗಾಗ ಜಗಳ ಮಾಡಿಕೊಂಡು ನನ್ನ ತವರು ಮನೆಗೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ.

ನನ್ನ ಮಾವ 2014 ನಿವೃತ್ತಿ ಹೊಂದಿರುತ್ತಾರೆ. ಗಗನ್ ದೀಪ್ ಎಂದರೆ ನನ್ನ ಮೊದಲ ಮಗ, ಅವನಿಗೆ 2014 ಕ್ಕೆ 1 ವರ್ಷ ವಯಸ್ಸಾಗಿತ್ತು, ನನಗೆ 24 ವರ್ಷ ಮತ್ತು ಗಂಡನಿಗೆ 34 ವರ್ಷ, ನನ್ನ ಮಾವನಿಗೆ 60 ವರ್ಷ ಮತ್ತು ಅತ್ತೆಗೆ 55 ವರ್ಷ ವಯಸ್ಸಾಗಿತ್ತು ಎಂದರೆ ನಿಜ. 2014 ಕ್ಕೆ ವಾದಿಗೆ 36 ವರ್ಷ

ವಯಸ್ಸಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಮಾವ ಮತ್ತು ಗಂಡ ಖರೀದಿಸಿರುವ ಆಸ್ತಿಗಳು ಎಂದು ನುಡಿದಿರುತ್ತಾರೆ. ದಾವಾ ಐಟಂ ನಂ.4 ರಿಂದ 6 ರ ಆಸ್ತಿಗಳನ್ನು ನನ್ನ ಮಾವ ಖರೀದಿಸಿದ್ದಾರೆ ಎಂದರೆ ನಿಜ. ಸಾಕ್ಷಿ ಮುಂದುವರೆದು ನನ್ನ ಗಂಡ ಮತ್ತು ಮಾವ ಇಬ್ಬರು ಸೇರಿ ಖರೀದಿಸಿರುತ್ತಾರೆ. ಒಟ್ಟು ಕುಟುಂಬದ ಆದಾಯದಿಂದ ದಾವಾ ಐಟಂ ನಂ.4 ರಿಂದ 6 ರ ಆಸ್ತಿಗಳನ್ನು ಖರೀದಿಸಲಾಗಿದೆ ಎಂದರೆ ಸರಿಯಲ್ಲ.

ಪಾಲಿಸಿಗಳನ್ನು ಒಟ್ಟು ಕುಟುಂಬದ ಆದಾಯದಿಂದಲೇ ಮಾಡಿಸಲಾಗಿದೆ ಎಂದರೆ ಸರಿಯಲ್ಲ. ಪಾಲಿಸಿಗೆ ಕಂತುಗಳನ್ನು ಒಟ್ಟು ಕುಟುಂಬದ ಆದಾಯದಿಂದಲೇ ಪಾವತಿ ಮಾಡಲಾಗಿದೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಗಳಲ್ಲಿ ಹಿಸ್ಸೆ ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ವಾದಿ ಯಾರೆಂದು ಗೊತ್ತಿಲ್ಲವೆಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರದನ್ಯಾದಂ., ಕಡೂರು.**